ಸಿಸಿನಂಬ್ರ 758/2024
ಚಾಸಾ -01
ಪ್ರಾಸಾ -01

ದಿನಾಂಕಃ 23-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಹೆಚ್ ಹೆಚ್ ಕೆ ವಕೀಲರಿಂದಃ**

ಆರೋಪಿತರ ಹಾಗೂ ನಿಮ್ಮ ನಡುವೆ ಜಾಗದ ವಿಚಾರವಾಗಿ ಎಷ್ಟು ವರ್ಷಗಳಿಂದ ತಕರಾರು ಇತ್ತು ಎಂದರೆ 6-7 ವರ್ಷಗಳಿಂದ ಇತ್ತು . ಕೂಸು ಕುಂದರ್ನಿಮಗೆ ಏನು ಆಗಬೇಕು ಎಂದರೆ ನಮ್ಮ ಅಜ್ಜಿ . ಸುಶೀಲಾ ಮರಕಲ್ತಿ ರವರು ನಿಮಗೆ ಏನು ಆಗಬೇಕು ಎಂದರೆ ನಮ್ಮ ನೆರೆಹೊರೆಯವರು . ಸುಶೀಲಾ ಮರಕಲ್ತಿ ರವರು ನಿಮ್ಮ ವಿರುದ್ದ ಸಿವಿಲ್ ದಾವೆಯನ್ನು ಸಲ್ಲಿಸಿದ್ದಾರೆಯೇ ಎಂದರೆ ಹೌದು . ಸುಶೀಲಾ ಮರಕಲ್ತಿ ರವರು 2 ನೇ ಆರೋಪಿಯವರ ತಾಯಿಯವರು ಎಂದರೆ ಹೌದು . ಸುಶೀಲಾ ಮರಕಲ್ತಿ ರವರು 1 ಮತ್ತು ಮೃತ 3 ನೇ ಆರೋಪಿಯವರ ಅಜ್ಜಿ ಎಂದರೆ ಹೌದು . ಸುಶೀಲಾ ಮರಕಲ್ತಿ ರವರು ಅಸಲು ದಾವಾ ಸಂಖ್ಯೆ 15/2020 ನ್ನು ನಿಮ್ಮ ವಿರುದ್ದ ಮಾನ್ಯ ಎರಡನೇ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಸಲ್ಲಿಸಿದ್ದು ಅದು ಬಾಕಿ ಇರುತ್ತದೆ ಎಂದರೆ ಹೌದು . ಸುಶೀಲಾ ಮರಕಲ್ತಿ ರವರು ದಾವಾ ಜಾಗವನ್ನು ನಮ್ಮ ಮಾವ ಚೆನ್ನ ಮರಕಾಲ ರವರು ನಮಗೆ ನೀಡಿದ್ದಾರೆಂದು ಸಾಧನೆ ಮಾಡುತಿದ್ದಾರೆ ಎಂದರೆ ಹೌದು . 2 ನೇ ಆರೋಪಿಯವರು ನಿಮ್ಮ ವಿರುದ್ದ ಅಸಲು ದಾವಾ ಸಂಖ್ಯೆ 126/2020 ನ್ನು ಮಾನ್ಯ.ಎರಡನೇ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಸಲ್ಲಿಸಿದ್ದು ಅದು ಬಾಕಿ ಇರುತ್ತದೆ ಎಂದರೆ ಹೌದು . ಸುಶೀಲಾ ಮರಕಲ್ತಿ ರವರು ನಿಮ್ಮ ಹಾಗೂ ಇತರೆ 29 ಜನರ ವಿರುದ್ದ ನ್ಯಾಯಾಲಯದಲ್ಲಿ ಖಾಸಗಿ ದೂರನ್ನು ಸಲ್ಲಿಸಿ, ಮಲ್ಪೆ ಪೊಲೀಸ್ ಠಾಣೆಗೆ ತನಿಖೆಗಾಗಿ ಆದೇಶವಾಗಿರುತ್ತದೆ ಎಂದರೆ ಹೌದು . ಚೆನ್ನ ಮರಕಾಲ ರವರು ಕೂಸು ಮರಕಾಲ್ತಿರವರಿಗೆ ನೀಡಿದ 20 ಸೆಂಟ್ಸ್ ಭೂವಿಗೆ ಸಂಬಂಧಿಸಿದಂತೆ ನೀವು ಹಾಗೂ ಇತರ 29 ಮಂದಿ ಒಬ್ಬ ವ್ಯಕ್ತಿಗೆ ಅಧಿಕಾರ ಪತ್ರವನ್ನು ನೀಡಿರುತ್ತೇವೆ ಎಂದು ನ್ಯಾಯಾಲಯದಲ್ಲಿ ಸುಳ್ಳು ಅಧಿಕಾರ ಪತ್ರ ಸಲ್ಲಿಸಿ ತಮ್ಮ ಹೆಸರಿಗೆ ಭೂವಿಯನ್ನು ಮಾಡಿಕೊಂಡಿದ್ದಾರೆ ಎಂದು ಸುಶೀಲಾ ಮರಕಲ್ತಿ ರವರು ಖಾಸಗಿ ದೂರನ್ನು ಸಲ್ಲಿಸಿರುವುದು ಎಂದರೆ ಸುಳ್ಳು .

ಆರೋಪಿತರು ಹಾಗೂ ಸುಶೀಲಾ ಮರಕಾಲ್ತಿ ರವರು ಚೆನ್ನ ಮರಕಾಲ ರವರು ನೀಡಿದ ಭೂಮಿಯಲ್ಲಿ ದೊಡ್ಡ ಸ್ಲ್ಯಾಬ್ ಮನೆಯನ್ನು ಕಟ್ಟಿಕೊಂಡು 1943 ರಿಂದಲೂ ವಾಸವಾಗಿರುತ್ತಾರೆ ಎಂದರೆ ಇತ್ತೀಚಿಗೆ ಮನೆಯನ್ನು ಕಟ್ಟಿಕೊಂಡು ವಾಸವಾಗಿರುತ್ತಾರೆ . ಘಟನೆಯಾಗಿದೆ ಎಂದು ಹೇಳುವ ಎಷ್ಟು ದಿನಗಳ ನಂತರ ನೀವು ಪೊಲೀಸ್ ಠಾಣೆಗೆ ದೂರು ನೀಡಿರುತೀರಿ ಎಂದರೆ ಅದೇ ದಿನ ನೀಡಿರುತ್ತೇನೆ . ನಿಮ್ಮ ಪ್ರಕಾರ 02-09-2018 ರಂದೇ ನೀವು ಮಲ್ಪೆ ಪೊಲೀಸ್ ಠಾಣೆಗೆ ದೂರು ನೀಡಿರುವುದೇ ಎಂದರೆ ಹೌದು . ದೂರನ್ನು ನೀಡುವ ಮೊದಲು ನೀವು ನಿಮ್ಮ ಮನೆಯಲ್ಲಿ ಕೂತು ಮಾತುಕತೆಯನ್ನು ಮಾಡಿರುತೀರಾ ಎಂದರೆ ಇಲ್ಲ . ನೀವು ಹಾಗೂ ಇತರ 29 ಜನರು ಸೇರಿಕೊಂಡು ನ್ಯಾಯಾಲಯಕ್ಕೆ ಅಧಿಕಾರ ಪತ್ರ ಸಲ್ಲಿಸಿ ಡಿಕ್ರಿ ಪಡೆದುಕೊಂಡ ನಂತರ ಈ ದೂರನ್ನು ಸಲ್ಲಿಸಿರುವುದು ಎಂದರೆ ಇಲ್ಲ . ನಿಮ್ಮ ಹೆಂಡತಿಯವರ ಹೆಸರು ಏನು ಎಂದರೆ ಸುನೀತಾ. ನಿಮ್ಮ ಹೆಂಡತಿಯವರು ನ್ಯಾಯವಾದಿಗಳು ಎಂದರೆ ಹೌದು . ನಿಮ್ಮ ಹೆಂಡತಿಯವರು ಉಡುಪಿಯ ನ್ಯಾಯಾಲಯದಲ್ಲೇ ವಕೀಲ ವೃತ್ತಿ ಮಾಡುತಿದ್ದಾರೆ ಎಂದರೆ ಹೌದು . ನಿಮ್ಮ ಮನೆಗೂ ವಿವಾದಿತ ಭೂವಿಗೂ ಎಷ್ಟು ಅಂತರ ಇದೆ ಸಾಕ್ಷಿಯವರು ಮೊದಲು ಹೊಂದಿಕೊಂಡಿದೆ ಎಂದು ಹೇಳಿ ನಂತರ 20 ರಿಂದ 30 ಮೀಟರ್ ಇದೆ ಎಂದು ಹೇಳುತ್ತಾರೆ . ನಿಪಿ 5 ನ್ನು ಸಾಕ್ಷಿಯವರಿಗೆ ತೋರಿಸಿ ಅದರಲ್ಲಿ 3 ನೇ ಆರೋಪಿಯವರು ಕಾಣಿಸುತ್ತಿಲ್ಲ ಎಂದರೆ ಹೌದು . ಅದೇ ರೀತಿ ಅದರಲ್ಲಿ ಕಾಣುವ ಮನೆಯು ಆರೋಪಿತರು ವಾಸವಾಗಿರುವ ಮನೆ ಎಂದರೆ ಹೌದು . ನಿಪಿ5 ರಲ್ಲಿ ನೀವು ಕಾಣುವುದಿಲ್ಲ ಎಂದರೆ ಹೌದು . ಸಾಕ್ಷಿಯವರಿಗೆ ನಿಪಿ 5 ನ್ನು ತೋರಿಸಿ ಇದರಲ್ಲಿ ಬಿಳಿ ಅಂಗಿ ಧರಿಸಿರುವ ವ್ಯಕ್ತಿಯವರು ಚಾಸಾ 2 ಆಗಿದ್ದು ಅವರು ಆರೋಪಿತರು ಕತ್ತಿ ಹಿಡಿದಿರುವ ಬಗ್ಗೆ ಯಾವುದೇ ಪ್ರತಿಕ್ರಿಯೆಯನ್ನು ತೋರಿಸುವಂತೆ ಕಾಣುತಿಲ್ಲ ಎಂದರೆ ಸಾಕ್ಷಿಯವರು ಅವರು ಯಾವುದೇ ಪ್ರತಿಕ್ರಿಯೆ ನೀಡುತಿಲ್ಲ ಎನ್ನುತ್ತಾರೆ. ಬೇರೆ ಬೇರೆ ಫೋಟೋಗಳನ್ನು ತೆಗೆದುಕೊಂಡು ತಂತ್ರಜ್ಞಾನದ ಸಹಾಯದಿಂದ ಕೂಡಿಸಿ ನಿಪಿ 3 ರಿಂದ 6 ನ್ನು ಸೃಷ್ಟಿ ಮಾಡಿ ಈ ಪ್ರಕರಣಕ್ಕಾಗಿ ತಂದು ಹಾಜರು ಮಾಡಿರುವುದು ಎಂದರೆ ಸರಿಯಲ್ಲ. ನೀವು ಎಷ್ಟು ಕಲ್ಲುಕಂಭ ಗಳನ್ನು ನೆಟ್ಟಿರುತೀರಿ ಎಂದರೆ 9 ಕಲ್ಲುಕಂಭಗಳನ್ನು ನೆಟ್ಟಿರುತ್ತೇವೆ . 9 ಕಲ್ಲುಕಂಭಗಳನ್ನು ನೆಟ್ಟಿರುವ ಫೋಟೋಗಳನ್ನು ತನಿಖಾಧಿಕಾರಿಯವರಿಗೆ ನೀಡಿರುತೀರಾ ಎಂದರೆ ಹೌದು. ತನಿಖಾಧಿಕಾರಿಯವರು ಪಂಚನಾಮೆ ಕಾಲದಲ್ಲಿ ಕಲ್ಲುಕಂಭಗಳನ್ನು

ನೆಟ್ಟಿರುವ ಫೋಟೋಗಳನ್ನು ತೆಗೆಸಿದ್ದಾರೆಯೇ ಎಂದರೆ ಇಲ್ಲ . ನಿಪಿ3 ರಲ್ಲಿ ಕಾಣುವ ಜಾಗದಲ್ಲಿ ನೀವು ಕಲ್ಲುಕಂಭಗಳನ್ನು ನೆಟ್ಟಿರುತ್ತೇವೆ ಎಂದು ಹೇಳುವುದು ಎಂದರೆ ಹೌದು . ನಿಪಿ4 ರಲ್ಲಿ ಕಾಣುವ ಜಾಗವು ನಿಪಿ 3 ರಲ್ಲಿ ಕಾಣುವ ಜಾಗವಾಗಿರುತ್ತದೆಯೇ ಎಂದರೆ ಹೌದು . ನಿಪಿ 3 ಮತ್ತು 4 ರಲ್ಲಿ ಕಾಣುವ ಜಾಗಗಳು ಬೇರೆ ಬೇರೆ ಎಂದರೆ ಅವು ಒಂದೇ ಜಾಗವಾಗಿರುತ್ತದೆ . ನಿಪಿ 3 ಹಾಗೂ ನಿಪಿ 4 ಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸಂಬಂಧ ಇರುತ್ತದೆ . 15000 ರೂಪಾಯಿಗಳು ನಷ್ಟವಾಗಿದೆ ಎಂದು ಮುಖ್ಯವಿಚಾರಣೆಯಲ್ಲಿ ಹೇಳಿರುವ ವಿಚಾರಗಳನ್ನು ನಿಪಿ 1 ದೂರಿನಲ್ಲಿ ಹೇಳಿರುತೀರಾ ಎಂದರೆ ಹೌದು. ಕೂಸು ಮರಕಾಲ್ತಿ ಹಾಗೂ ಆರೋಪಿತರು ವಾಸವಾಗಿರುವ 20 ಸೆಂಟ್ಸ್ ಜಾಗಕ್ಕೆ ಆರೋಪಿತರು ಅಕ್ರಮ ಪ್ರವೇಶ ಮಾಡಿದ್ದಾರೆಂದು ನೀವು ಹೇಳುವುದೇ ಎಂದರೆ ಅಲ್ಲ . 20 ಸೆಂಟ್ಸ್ ಜಾಗವು 2018 ಕ್ಕೆ ಮುಂಚೆ ಕೂಸು ಮರಕಾಲ್ತಿ ರವರ ಹೆಸರಿನಲ್ಲಿದ್ದ ಜಾಗ ಎಂದರೆ ಸರಿಯಲ್ಲ . ನಿಪಿ 3 ರಿಂದ 6 ರಲ್ಲಿ 10 ಕಲ್ಲುಕಂಭಗಳು ಕಾಣುತ್ತಿಲ್ಲ ಎಂದರೆ ಹೌದು . ನಿಮಗೆ ಯಾವುದೇ ವಿಷಯ ಗೊತ್ತಿರುವುದಿಲ್ಲ ಸಿವಿಲ್ ದಾವೆ ಹಾಗೂ ಪ್ರಸ್ತುತ ಪ್ರಕರಣದ ಬಗ್ಗೆ ನಿಮ್ಮ ಹೆಂಡತಿಯವರೇ ತಯಾರಿಸಿ ಕೊಟ್ಟಿರುವುದು ಎಂದರೆ ಸರಿಯಲ್ಲ . 2-09-2018 ರಂದು ನೀವು ಪೊಲೀಸ್ ಠಾಣೆಗೆ ದೂರನ್ನು ನೀಡಿದ ನಂತರ ಮತ್ತೆ ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ ಎಂದರೆ 3 ನೇ ತಾರೀಖಿನಂದು ಹೋಗಿರುತ್ತೇನೆ . 3 ನೇ ತಾರೀಖಿನಂದು ನೀವು ಪೊಲೀಸ್ ಠಾಣೆಗೆ ಹೋದ ಸಮಯದಲ್ಲಿ ಯಾರೆಲ್ಲಾ ಬಂದಿದ್ದರು ಎಂದರೆ ನೆನಪಿಲ್ಲ . ಚಾಸಾ 2 ರವರು ಆ ದಿನ ಬಂದಿದ್ದರೇ ಎಂದರೆ ನೆನಪಿಲ್ಲ . ಚಾಸಾ 6 ಮತ್ತು 7 ರವರು ಆ ದಿನ ನಿಮ್ಮೊಂದಿಗೆ ಬಂದಿದ್ದರೇ ಎಂದರೆ ಇಲ್ಲ . 3 ನೇ ತಾರೀಖಿನಂದು ನೀವು ಪೊಲೀಸ್ ಠಾಣೆಗೆ ಹೋದಾಗ ಪೋಲಿಸ್ ನವರು ಎಷ್ಟು ದಾಖಲೆಗಳನ್ನು ಮಾಡಿರುತ್ತಾರೆ ಮತ್ತು ನೀವು ಎಷ್ಟು ಸಹಿಗಳನ್ನು ಮಾಡಿರುತೀರಿ ಎಂದರೆ ನೆನಪಿಲ್ಲ. ಆ ನಂತರ ನೀವು ಪೊಲೀಸ್ ಠಾಣೆಗೆ ಹೋಗಿರುತೀರಾ ಎಂದರೆ ಇಲ್ಲ . ಆನಂತರ ನಿಮ್ಮನ್ನು ಪೊಲೀಸ್ ನವರು ವಿಚಾರಣೆ ಮಾಡಿದ್ದಾರೆ ಎಂದರೆ 4 ನೇ ತಾರೀಖಿಂದು ಪಂಚನಾಮೆ ಮಾಡಲು ಬಂದಿರುತ್ತಾರೆ . ಆ ದಿನ ನಿಮಗೆ ಪೊಲೀಸ್ ನವರು ನೋಟಿಸು ನೀಡಿದ್ದಾರೆಯೇ ಎಂದರೆ ನೆನಪಿಲ್ಲ . 4 ನೇ ತಾರೀಖಿಂದು ಪೊಲೀಸ್ ನವರು ಪಂಚನಾಮೆಗೆ ಬರುವ ಮೊದಲು ನಿಮ್ಮನ್ನು ಪೊಲೀಸ್ ಠಾಣೆಗೆ ಕರೆದಿರುತ್ತಾರೆಯೇ ಎಂದರೆ ನೆನಪಿಲ್ಲ . ಸಾಕ್ಷಿದಾರರನ್ನು

ಪೊಲೀಸ್ ಠಾಣೆಗೆ ಬರಬೇಕು ಎಂದು ಕರೆದಿರುತ್ತಾರೆಯೇ ಎಂದರೆ ನೆನಪಿಲ್ಲ . ಚಾಸಾ 6 ಮತ್ತು 7 ರವರು ಎಲ್ಲಿಯವರು ಎಂದರೆ ಮಲ್ಪೆ ಯವರು . ಚಾಸಾ 6 ಮತ್ತು 7 ರವರ ಮನೆ ಘಟನಾ ಸ್ಥಳ ದಿಂದ ಎಷ್ಟು ದೂರದಲ್ಲಿ ಇದೆ ಎಂದರೆ 6 ರಿಂದ 7 ಕಿಲೋ ಮೀಟರ್ ದೂರದಲ್ಲಿದೆ . ಚಾಸಾ 6 ಮತ್ತು 7 ರವರು ನಿಮಗೆ ಏನು ಆಗಬೇಕು ಎಂದರೆ ಸ್ನೇಹಿತರು . ಅವರು ನಿಮ್ಮ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತಾರೆ ಎಂದರೆ ಹೌದು . ಆರೋಪಿತರನ್ನು ನೀವು ಚಿಕ್ಕಂದಿನಿಂದಲೂ ನೋಡುತಿದ್ದಿರಿ ಎಂದರೆ ಹೌದು. ಆರೋಪಿತರ ಮನೆಯ ಒಕ್ಕಲಿಗೆ ನೀವು ಹೋಗಿರುತೀರಿ ಎಂದರೆ ಇಲ್ಲ. ಆರೋಪಿತರನ್ನು ನೋಡಿದರೆ ನೀವು ಹೆದರುತೀರಾ ಎಂದರೆ ಇಲ್ಲ . ಚಾಸಾ 3 ಮತ್ತು 4 ರವರು ನಿಮಗೆ ಏನು ಆಗಬೇಕು ಎಂದರೆ ನನ್ನ ಅಕ್ಕ ಮತ್ತು ಅಣ್ಣ . ಆರೋಪಿತರ ಪಿರ್ತಾಜಿತ ಆಸ್ತಿಯನ್ನು ಹೊಡೆಯುವ ಹುನ್ನಾರದಿಂದ ನೀವು ಮತ್ತು ನಿಮ್ಮ ಮನೆಯವರು ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ತೊಂದರೆ ನೀಡುತಿದ್ದೀರಿ ಎದಂರೆ ಸರಿಯಲ್ಲ . ಆರೋಪಿತರು ನೀವು ಹೇಳಿದ ರೀತಿಯಲ್ಲಿ ಕತ್ತಿಯನ್ನು ತೋರಿಸಿರುವುದಿಲ್ಲ , ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ , ಜೀವ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿಯಲ್ಲ . ನೀವು ನಿಪಿ 1 ರಲ್ಲಿ ಹೇಳಿರುವಂತೆ ಯಾವುದೇ ಕಲ್ಲುಕಂಭಗಳನ್ನು ಹಾಕಿರುವುದಿಲ್ಲ, ಬೇಲಿಗಳನ್ನು ಹಾಕಿರುವುದಿಲ್ಲ ಎಂದರೆ ಸರಿಯಲ್ಲ . ಮುಮಾ 1 ಮತ್ತು 2 ಎಲ್ಲಾ ಕಡೆ ಸಹಜವಾಗಿ ಸಿಗುತ್ತದೆ ಎಂದರೆ ಅವು ಅಲ್ಲಿಯೇ ಇದ್ದ ವಸ್ತುಗಳು. 02-09-2018 ರಂದು ನೀವು ದೂರು ನೀಡಿದಾಗ ಪೊಲೀಸಿನವರು ಸ್ಥಳಕ್ಕೆ ಬಂದಿದ್ದಾರೆಯೇ ಎಂದರೆ ಇಲ್ಲ. 3-09-2018 ರಂದು ಬಂದಿದ್ದರೇ ಎಂದರೆ ಹೌದು. 03-09-2018 ರಂದು ಪೊಲೀಸಿನವರು ಸ್ಥಳಕ್ಕೆ ಬಂದಿದ್ದಾಗ ನಿಪಿ 2 ನ್ನು ತಯಾರಿಸಿದ್ದಾರೆಯೇ ಎಂದರೆ ಇಲ್ಲ . 03-09-2018 ರಂದು ಪೊಲೀಸಿನವರು ಸ್ಥಳಕ್ಕೆ ಬಂದಿದ್ದಾಗ ನಿಮ್ಮ ಹಾಗೂ ಇತರ ಸಾಕ್ಷಿದಾರರ ಹೇಳಿಕೆಯನ್ನು ದಾಖಲು ಮಾಡಿರುತ್ತಾರಾ ಎಂದರೆ ಮಾಡಿರಬಹುದು ನೆನಪಿಲ್ಲ . 03-09-2018 ರಂದು ಪೊಲೀಸಿನವರು ಸ್ಥಳಕ್ಕೆ ಬಂದಿದ್ದಾಗ ಕತ್ತಿ ಮತ್ತು ಕಲ್ಲು ಕಂಭವನ್ನು ಹಿಡಿದುಕೊಂಡು ಹೋಗಿದ್ದಾರೆಯೇ ಎಂದರೆ ಹೋಗಿರಬಹುದು ನೆನಪಿಲ್ಲ . ನೀವು ಮುಖ್ಯವಿಚಾರಣೆಯಲ್ಲಿ ಹೇಳಿರುವಂತೆ 03-09-2018 ರಂದು ಯಾವುದೇ ದೂರನ್ನು ಪೊಲೀಸಿನವರಿಗೆ ನೀಡಿರುವುದಿಲ್ಲ ಎದಂರೆ ಸರಿಯಲ್ಲ . ಪೊಲೀಸಿನವರು ನೀವು ಹೇಳಿದ ರೀತಿ ಸ್ಥಳಕ್ಕೆ ಬಂದಿರುವುದಿಲ್ಲ , ನಿಪಿ 2 ನ್ನು ಸ್ಥಳ

ದಲ್ಲಿ ತಯಾರಿಸಿರುವುದಿಲ್ಲ ಮುದ್ದೆ ಮಾಲು ಗಳನ್ನು ಜಪ್ತು ಮಾಡಿರುವುದಿಲ್ಲ ಎಂದರೆ ಸರಿಯಲ್ಲ . ಆರೋಪಿತರ ಅಜ್ಜಿಯವರು ನಿಮ್ಮ ವಿರುದ್ದ ಸಲ್ಲಿಸಿರುವ ಕ್ರಿಮಿನಲ್ ಪ್ರಕರಣದಿಂದ ತಪ್ಪಿಸಿಕೊಳ್ಳಲು ಉದ್ದೇಶದಿಂದ ಈ ಪ್ರಕರಣವನುನ ದಾಖಲು ಮಾಡಿರುವುದು ಎಂದರೆ ಸರಿಯಲ್ಲ . ಈ ಪ್ರಕರಣಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ .

**ಮರು ವಿಚಾರಣೆಃ** ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದರು.

ಪ್ರ.ಹಿ.ಸಿ.ನ್ಯಾ ಮತ್ತು ಸಿ.ಜೆ.ಎಂ
ಉಡುಪಿ.